ಮೈಸೂರ ಗೆಜೆಟ.

ನಂ. 14 ಸರ್ಕಾರದಿಂದ ಪಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಏಪ್ರೆಲ್ ಶಾ॥ 5, ಸನ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲ್ಲರ್, ಪಬ್ಲಿಕ್ ವರ್ಕಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟರಿಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್‌ರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು, ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 21ನೇ ಮಾರ್ಚಿ 1884.

ನಂ. 341.—1870ನೇ ಇಸವಿ ಕೋರ್ಟು ಫೀಜು ಆಕ್ಟಿನ 26-27—ವ 35ನೇ ಸೆಕ್ಷರ್ಷಗಳಿಂದ ಕೊಡೋಣಾದ ಅಧಿಕಾರವನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮ ಮಹಾರಾಜಾಸರ್ಕಾರದವರು ಸದರೀ ವಿಷಯಕ್ಕೆ ಸಂಬಂಧ ಪಟ್ಟ ಹಿಂದಿನ ತಮಾಂ ಇಸ್ತಿಹಾರ್‌ಗಳನ್ನು ರದ್ದುಪಡಿಸಿ ಇದರಡಿ ಬರುವ ನಿಬಂಧನೆಗಳನ್ನು ಹುಕ್ಕುಂ ಮಾಡುತ್ತಾರೆ:—

1. ಹತ್ತು ರೂಪಾಯಿಗಳಿಗೆ ಮೇಳಪಟ್ಟ ಫೀಜು ಮೊಬಲಗಿನ ವಿಷಯದಲ್ಲಿ ಸದರೀ ಮೊಬಲಗು ಅಂಟಿಸಲ್ಪಡತಕ್ಕ್ದು ವಂದೇ ಸ್ಟ್ಯಾಂಪ್ ಮೂಲಕ ತೋರಿಸ ಬೇಕಾದಾಗ ಅಂಥಾ ಫೀಜು ಮೊಬಲಗ್ಗು ಅವಶ್ಯಕವಾದ ಬೆಲೆಯುಳ್ಳ ಅಂಟಿಸಲ್ಪಡತಕ್ಕ ವಂದೇ ಸ್ಟ್ಯಾಂಪ್ಪು ಮೂಲಕ ತೋರಿಸಲ್ಪಡತಕ್ಕ್ದು, ಆದರೆ ಸದರೀ ಮೊಬಲಗ್ಗು ಅಂಟಿಸಲ್ಪಡತಕ್ಕ ವಂದೇ ಸ್ಟ್ಯಾಂಪ್ ಮೂಲಕ ತೋರಿಸಲ್ಪಡಲಿಕ್ಕೆ ಆಗದೆ ಇದ್ದರೂ ಅಥವಾ ಅವಶ್ಯಕವಾದ ಬೆಲೆಯುಳ್ಳ ಅಂಟಿಸಲ್ಪಡತಕ್ಕ ವಂದೇ ಸ್ಟ್ಯಾಂಪ್ಪು ದೊರೆಯದೆ ಇದ್ದರೂ ಅಂಥಾ ಸಂದರ್ಭದಲ್ಲಿ ದೊರಕುವಂಥಾ ಅದರ ಕೆಳಗಿನ ಕಮ್ಮೀದರದ ಸ್ಟ್ಯಾಂಪ್ಪು ವುಪಯೋಗಿಸಲ್ಪಟ್ಟು, ಅವಶ್ಯಕವಾದ ಫೀಜ್ ಮೊಬಲಗಿನ ಕಂಭರ್ತೀ ಬಗ್ಗೆಅದಕ್ಕಿಂತಲೂ ಕಮ್ಮಿ ಬೆಲೆಯುಳ್ಳ ಅಂಟಿಸಲ್ಪಡತಕ್ಕ ವಂದು ಅಥವಾ ಹೆಚ್ಚು ಸ್ಟ್ಯಾಂಪ್ಪುಗಳು ವುಪಯೋಗಿಸಲ್ಪಡತಕ್ಕ್ದು.

2. ಹತ್ತು ರೂಪಾಯಿಗಳು ಯಾ ಅದಕ್ಕೆ ಮೇಲ್ಪಟ್ಟ ಫೀಜ್ ಮೊಬಲಗಿನ ವಿಷಯದಲ್ಲಿ ಸದರೀ ಮೊಬಲಗು ಖಚಿತ ಮಾಡಲ್ಪಟ್ಟ ವಂದೇ ಸ್ಟ್ಯಾಂಪು ಮೂಲಕ ತೋರಿಸಲ್ಪಡಬೇಕಾದಾಗ, ಸದರೀ ಫೀಜ್ ಮೊಬಲಗು ಅವಶ್ಯಕವಾದ ಬೆಲೆಯುಳ್ಳ ಖಚಿತಮಾಡಲ್ಪಟ್ಟ ವಂದೇ ಸ್ಟ್ಯಾಂಪಿನ ಮೂಲಕ ತೋರಿಸಲ್ಪಡತಕ್ಕದ್ದು, ಆದರೆ ಸದರೀ ಮೊಬಲಗು ಖಚಿತಮಾಡಲ್ಪಟ್ಟ ವಂದೇ ಸ್ಟ್ಯಾಂಪು ಮೂಲಕ ತೋರಿಸಲ್ಪಡಲಿಕ್ಕೆ ಆಗದೆ ಇದ್ದರೂ ಅಥವಾ ಅವಶ್ಯಕವಾದ ಕಿಮ್ಮತ್ತಿನ ಖಚಿತಮಾಡಲ್ಪಟ್ಟ ವಂದೇ ಸ್ಟ್ಯಾಂಪು ದೊರಕದಿದ್ದರೂ ಅಂಥಾ ಸಂದರ್ಭದಲ್ಲಿ ದೊರ ಕಬಹುದಾದ ಅದರ ಕೆಳಗಿನ ಕಮ್ಮೀ ದರದ ಖಚಿತಮಾಡಲ್ಪಟ್ಟ ಸ್ಟ್ಯಾಂಪು ಉಪಯೋಗಿಸಲ್ಪಟ್ಟು ಅವಶ್ಯಕವಾದ ಫೀಜ್ ಮೊಬಲಗಿನ ಕಂ ಛರ್ತೀ ಬಗ್ಗೆ ದೊರಕುವಂಥಾ ಅದರ ಯರಡನೇ ಕಮ್ಮೀ ದರದ ಖಚಿತಮಾಡಲ್ಪಟ್ಟ ವಂದು ಯಾ ಹೆಚ್ಚು ಸಂಖ್ಯೆಯ ಸ್ಟ್ಯಾಂಪುಗಳು ಉಪ ಯೋಗಿಸಲ್ಪಡತಕ್ಕದ್ದಲ್ಲದೆ ಹತ್ತು ರೂಪಾಯಿಗಳಿಗೆ ಕಮ್ಮೀಯಾದ ಭಿನ್ನಾಂಶವನ್ನು ತೋರಿಸುವ ಬಗ್ಗಾಗಿ ಅಂಟಿಸಲ್ಪಡತಕ್ಕ ಸ್ಟ್ಯಾಂಪು ಉಪಯೋಗಿಸಲ್ಪಡತಕ್ಕದ್ದು.

3. ಯರಡನೇ ರೂಲ್ ಅನುಸರಿಸಿ ಉಪಯೋಗಿಸಲ್ಪಡುವ ಅಂಟಿಸಲ್ಪಡತಕ್ಕ ಯಾವದಾದರೂ ಸ್ಟ್ಯಾಂಪುಗಳು ಫೀಜ್ ಮೊಬಲಗು ತೋರಿಸುವದಕ್ಕೆ ಉಪಯೋಗಿಸಲ್ಪಟ್ಟ ಕೇವಲ ಜಾಸ್ತಿ ಬೆಲೆಯುಳ್ಳ ಅಂಥಾ ಖಚಿತಮಾಡಲ್ಪಟ್ಟ ಸ್ಟ್ಯಾಂಪಿಗೆ ಅಂಟಿಸಲ್ಪಡತಕ್ಕದ್ದು.

4. ಕೋರ್ಟ್‌ಫೀಜ್ ಆಕ್ಟ್ ಅನುಸರಿಸಿ ತೆರಲ್ಪಡಬೇಕಾದ ಫೀಜ್ ಮೊಬಲಗಿಗೋಸ್ಕರ ಯರಡು ಯಾ ಹೆಚ್ಚು ಸಂಖ್ಯೆಯುಳ್ಳ ಖಚಿತ ಮಾಡೋಣಾದ ಸ್ಟ್ಯಾಂಪುಗಳು ಉಪಯೋಗಿಸಲ್ಪಟ್ಟಾಗ ಹಾಗೆ ಉಪಯೋಗಿಸಲ್ಪಡುವ ಖಚಿತ ಮಾಡಲ್ಪಟ್ಟ ಪ್ರತಿ ಸ್ಟ್ಯಾಂಪಿನ ಮೇಲೆಯೂ ವ್ಯಾಜ್ಯ ವಿಷಯದ ವಂದು ಭಾಗವು ಬರೆಯಲ್ಪಟ್ಟು, ಸದರೀ ಬರಹವು ಅದು ಬರೆಯಲ್ಪಡುವ ಕಕ್ಷಿಗಾರ ಯಾ ಕಕ್ಷಿಗಾರರ ರುಜುವಿನ ಮೂಲಕ ದೃಢಪಡಿಸಲ್ಪಡತಕ್ಕದ್ದು.

5. ಬಂದು ಫೀಜ್ ಮೊಬಲಗನ್ನು ತೋರಿಸಲ್ಪಡುವ ಬಗ್ಗೆ ಉಪಯೋಗಿಸಲ್ಪಡುವ ಹೆಚ್ಚು ಸಂಖ್ಯೆಯುಳ್ಳ ಖಚಿತಮಾಡಲ್ಪಟ್ಟ ಸ್ಟ್ಯಾಂಪುಗಳು ಖಚಿತಮಾಡೋಣಾದ ಪುಟದಲ್ಲಿ ವ್ಯಾಜ್ಯವಿಷಯ ಯಾವತ್ತೂ ಬರಿಯಲ್ಪಡುವದಕ್ಕೆ ಸ್ಥಳ ಸಾಕಾಗದಿದ್ದರೆ, ವ್ಯಾಜ್ಯ ವಿಷಯ ವಾದ ಬರವಣಿಗೆ ಪೂರೈಸುವ ಬಗ್ಗೆ ಅವಶ್ಯಕವಾದಷ್ಟು ಖಾಲೀಕಾಗದ ಉಪಯೋಗಿಸಲ್ಪಟ್ಟು ಹಾಗೆ ಖಚಿತಮಾಡಲ್ಪಟ್ಟ ಸ್ಟ್ಯಾಂಪು ಕಾಗ ದದ ವ ಖಾಲೀಕಾಗದದ ಮೇಲೂ ಇರತಕ್ಕ ಬರಹಗಳು ಅದು ಬರೆಯಲ್ಪಡುವ ಕಕ್ಷಿಗಾರ ಯಾ ಕಕ್ಷಿಗಾರರಿಂದ ರುಜು ಮಾಡುವದರ ಮೂಲಕ ದೃಢಪಡಿಸಲ್ಪಡತಕ್ಕದ್ದು.

6. ವೆಂಡರು, ಅಂಟಿಸಲ್ಪಡತಕ್ಕ ಸ್ಟ್ಯಾಂಪುಗಳಲ್ಲಿರತಕ್ಕ ಖಾಲೀ ಸ್ಥಳದಲ್ಲಿ ಕ್ರಯಕ್ಕೆ ಪಡಕೊಂಡವನ ಹೆಸರು, ಕ್ರಯದ ತಾರೀಖು ಮತ್ತು ಅವನ ವಾಡಿಕೆಯಾದ ರುಜುವು ಸಹ ಮಾಡತಕ್ಕದ್ದು.

7. ಯಾವ ಸಂದರ್ಭದಲ್ಲಾಗಲಿ, ಕೋರ್ಟು ಫೀಜ್ ಆಕ್ಟ್‌ಅನುಸರಿಸಿ ಹಾಕಲ್ಪಡುವ ಫೀಜ್ ಮೊಬಲಗಿನಲ್ಲಿ ವಂದಾಣಿಯ ಭಿನ್ನಾಂಶವು ಪ್ರಾಪ್ತವಾದರೆ ಅಂಥಾ ಭಿನ್ನಾಂಶವು ವಜಾ ಮಾಡಲ್ಪಡತಕ್ಕದ್ದು.

8. ಮೇಲ್ಕಂಡ ನಿಬಂಧನೆಗಳನುಸರಿಸಿ ಉಪಯೋಗಿಸಲ್ಪಡಬೇಕಾದ ಖಚಿತ ಮಾಡಲ್ಪಟ್ಟ ಸ್ಟ್ಯಾಂಪುಗಳು, ಹಾಲೀ ಜಾರೀಯಲ್ಲಿರತ ಕ್ಕ ಜನರಲ್ ಸ್ಟ್ಯಾಂಪು ಕಾಗದಗಳ ಹಾಗೇಯೇ ಇರುತ್ತಲ್ಲದೆ ಮೇಲ್ಭಾಗದಲ್ಲಿ "ಮೈಸೂರು ಕೋರ್ಟು ಫೀ" ಯಂಬ ಮಾತುಗಳು ಉಂಟಾ ಗಿರುತ್ತೆ.

9. ಈ ನಿಬಂಧನೆಗಳು 1884ನೇ ಇಸವಿ ಏಪ್ರೆಲ್ ಗುರ್ಯ್ ಲಾಗಾಯತು ಜಾರೀಲಿ ಬರತಕ್ಕದ್ದು, ಆ ತಾರೀಖು ಮೊದಲು ಹತ್ತು ರೂಪಾಯಿ ಯಾ ಅದಕ್ಕೆ ಮೇಲ್ಪಟ್ಟ ಬೆಲೆಯುಳ್ಳ ಕೋರ್ಟು ಫೀ ಟಾಂಪುಗಳು ಅಂಟಿಸಲ್ಪಡತಕ್ಕ ಲೇಬಿಲ್ಲುಗಳು ಕೊಡಲ್ಪಡ ಕೂಡದು, ಮೊದ ಲೇ ಕೊಂಡುಕೊಳ್ಳಲ್ಪಟ್ಟ ಅಂಥಾ ಲೇಬಿಲ್‌ಗಳು 1884ನೇ ಇಸವಿ ಏಪ್ರಿಲ್ 30ನೇ ತಾರೀಖಿನ ವರಿಗೆ ಉಪಯೋಗಿಸಲ್ಪಡುವದಕ್ಕೆ ಅಂಗೀ ಕರಿಸ ಬಹುದು, ಆ ತಾರೀಖು ತರುವಾಯ ಅಂಥಾ ಲೇಬಿಲ್‌ಗಳು ಉಪಯೋಗಿಸಲ್ಪಡ ಕೂಡದು. ಯಲ್ಲ ಸರ್ಕಾರ್ ಖಜಾನೆಗಳಲ್ಲೂ 1884ನೇ ಇಸವೀ ಮೇ 31ನೇ ಮರ್ತು ಮಿಗೆ ಮುಂಚಿತವಾಗಿ ಅಂಥಾ ಲೇಬಿಲ್‌ಗಳು ವಾಪಸ್ ಮಾಡಲ್ಪಟ್ಟರೆ ಅವುಗಳ ಕಿಮ್ಮತ್ತು ಕೊಡಲ್ಪಡುವದು.

ತಾರೀಖು 26ನೇ ಮಾರ್ಚೀ 1884.

ನಂ. 342.—ಈ ವಿಷಯವಾಗಿ ಹಾಲಿ ಜಾರೀಲಿ ಇರತಕ್ಕ ಹುಕ್ಕುಂಗಳನ್ನು ರದ್ದುಪಡಿಸಿ, ದೀವಾನ್ ಸಾಹೇಬರವರು ಹುಕ್ಕುಂ ಮಾ ಡುವದೇನಂದರೆ, ಬ್ರೀಫ್ ಆಫ್ ಕಂಟ್ರಾಕ್ಟ್ ಆಕ್ಟ್ ಅನುಸರಿಸಿ ಕೊಡಗು ದೇಶದಿಂದ ಕೊಡಲ್ಪಡುವ ಅವ್ವಲ್ ವಾರೆಂಟನ್ನು ಮೈಸೂರು ದೇಶದಲ್ಲಿ ಜಾರೀ ಮಾಡುವದಕ್ಕೋಸ್ಕರ 3 ರೂಪಾಯಿ ಫೀಜು ವಸೂಲ್ಮಾಡಲ್ಪಡತಕ್ಕದ್ದು.

ಅವ್ವಲ್ ವಾರೆಂಟುಗಳು ಜಾರೀ ಮಾಡಲ್ಪಡದೆ ಇದ್ದ ಸಂದರ್ಭಗಳಲ್ಲಿ ಎರಡನೇ ಮತ್ತು ತದನಂತರ ಕೊಡಲ್ಪಡುವ ವಾರೆಂಟುಗಳು ಯಾವ ಫೀಜು ಇಲ್ಲದೇನೆ ಜಾರೀ ಮಾಡಲ್ಪಡತಕ್ಕದ್ದು.

ನಂ. 343.—ಸ್ನ 1870ನೇ ಇಸವಿ ಕೋರ್ಟು ಫೀಜ್ ಆಕ್ಟಿನ 35ನೇ ಸೆಕ್ಷನ್‌ನಿಂದ ಉಂಟಾಗಿರುವ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮ್ಮ ಮಹಾರಾಜಾ ಸರಕಾರದವರು, ಸದರೀ ಆಕ್ಟಿನ 1ನೇ ಪೆಡ್ಯೂಲ್ 6, 7 ಮತ್ತು 9ನೇ ಕ್ಲಾಜ್‌ಗಳನುಸರಿಸಿ ಖಾಯಿಷ್ ಮಾಡುವ ಜನಗಳ ಖುದ್ದು ಉಪಯೋಗಕ್ಕೊಸ್ಕರ ಸಿವಿಲ್ ಮ ಕ್ರಿಮಿನಲ್ ಕೋರ್ಟುಗಳಿಂದ ಕೊಡಲ್ಪಡುವನಕ್ಕಲ್‌ಗಳಿಗೋಸ್ಕರ ಕೊಡಬೇಕಾದ ಕೋರ್ಟು ಫೀಜನ್ನು ಮಾಫ್ ಮಾಡಿರುತ್ತಾರೆ.

ಆದರೆ, ಯಾವ ನ್ಯಾಯಸ್ಥಾನದಲ್ಲಿಯಾಗಲಿ ಸದರೀ ನಕ್ಕಲ್‌ಗಳು ದಾಖಲ್ಮಾಡುವಣ, ತೋರಿಸುವಣ, ಅಥವಾ ರಿಕಾರ್ಡಿಗೆ ಸೇರಿಸುವಣ, ಅಥವಾ ಸರಕಾರ ಉದ್ಯೋಗಸ್ಥರಿಂದ ಬರಮಾಡಿ ಕೊಳ್ಳಲ್ಪಡುವಣ ಇಂಥಾ ಸಂದರ್ಭಗಳಲ್ಲಿ, ಆ ಪ್ರಕಾರ ಕೊಡಲ್ಪಡುವ ನಕ್ಕಲ್‌ಗಳಿಗೋಸ್ಕರ ವಸೂಲ್ಮಾಡಲ್ಪಡತಕ್ಕ ಫೀಜು ಮಾಫ್ ಮಾಡಲ್ಪಟ್ಟಿರುತ್ತೆ ಯಂದು ಈ ಇಸ್ತಿಹಾರ್‌ನಾಮೆಯಿಂದ ತಿಳಿಯತಕ್ಕದ್ದಲ್ಲವೆ.

ತಾರೀಖು 27ನೇ ಮಾರ್ಚಿ 1884.

ನಂ. 344—ಇಂಡ್ಯ ದೇಶದ ಸರ್ವೆ ಇಲಾಖಾ ಡೆ॥ ಸೂಪರಿಂಟೆಂಡೆಂಟ್ ಮೇಜರ್ ಜೆ. ಆರ್. ಮೆಕ್ಕಲ್ಲಾ, ಆರ್. ಈ. ಯವರು 1884ನೇ ಮಾರ್ಚಿ 7ನೇ ಮಂಗಳವಾರ ಸಾಯಂಕಾಲ ಬೆಂಗಳೂರಿಗೆ ಬಂದು ಸೇರಿದರು. ಅದೇ ತಿಂಗಳು 20ನೇ ತಾರೀಖು ಮಧ್ಯಾನ್ಹಾತ್ಪೂರ್ವ ಮೈಸೂರು ಟೊಪೊಗ್ರಾಫಿಕಲ್ ಸರ್ವೆ ಪಾರ್ಟಿ ಚಾರ್ಜನ್ನು ವಹಿಸಿದರು.

ನಂ. 345.—ಚಿತ್ರದುರ್ಗ ಮುನಿಸಿಫರಾದ ಶ್ರೀನಿವಾಸರಾಯರಿಗೆ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ನಂ. 347.—ಕಡೂರು ಡಿಸ್ಟ್ರಿಕ್ಟು, ಅರಸೀಕೆರೆ ತಾಲ್ಲೂಕು ಅಮಲ್ದಾರ್ ಶ್ರೀ. ಡಿ. ರಾಮಸ್ವಾಮಿ ಐಯರ್‌ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ವಂದು ತಿಂಗಳೂ ಇಪ್ಪತ್ತೊಂದುದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ತಾರೀಖು 22ನೇ ಮಾರ್ಚಿ 1883.

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ನ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಿಗ್ಗೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡ್ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

ಬಮೋಜೀಬ್ ಹುಕ್ಕುಂ,

ಸಿ. ರಾಘವಾಚಾರ್ಲು,
ಪ್ರೈವೇಟ್ ಸೆಕ್ರಟೇರಿ.